FDA-2021 — 9.K.

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

ಪ್ರಶ್ನೆಪತ್ರಿಕೆ ವರ್ಷನ್ ಕೋಡ್

**A**

2021

# ಪ್ರಶ್ನೆಪುಸ್ತಿಕೆ

## ಸಾಮಾನ್ಯ ಜ್ಞಾನ (ಪತ್ರಿಕೆ - III)

9

ಗರಿಷ್ಠ ಸಮಯ : 1½ ಗಂಟೆಗಳು | ವಿಷಯ ಸಂಕೇತ : **385** | ಗರಿಷ್ಠ ಅಂಕಗಳು : 100

### ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿ ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆಪತ್ರಿಕೆಯಲ್ಲಿನ ಪುಟಗಳನ್ನು ಸರಿಯಾಗಿ ಪರಿಶೀಲಿಸದೇ **ದೋಷಪೂರಿತ ಪ್ರಶ್ನೆಪತ್ರಿಕೆಯನ್ನೇ ಉಪಯೋಗಿಸಿದಲ್ಲಿ ಇದಕ್ಕೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.**
2. ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮತ್ತು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು. ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.
3. **ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿ ಹಾಗೂ ನಿಮಗೆ ನೀಡಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯು ಒಂದೇ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ವ್ಯತ್ಯಾಸವಿದ್ದಲ್ಲಿ, ಒ.ಎಂ.ಆರ್. ಉತ್ತರ ಹಾಳೆಯಲ್ಲಿ ತಿಳಿಸಿರುವ ಅದೇ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಸಂವೀಕ್ಷಕರಿಂದ ಪಡೆದುಕೊಳ್ಳತಕ್ಕದ್ದು.**
4. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು ಇರುತ್ತವೆ.
5. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆಪತ್ರಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

6. **ಈ ಪ್ರಶ್ನೆಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಆಯ್ಕೆಗಳನ್ನು ಒಳಗೊಂಡಿರುತ್ತದೆ. ನೀಡಿರುವ ಆಯ್ಕೆಗಳಲ್ಲಿ ಒಂದು ಸರಿಯಾದ ಉತ್ತರವನ್ನು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಗುರುತು ಮಾಡಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಪ್ರತಿ ಪ್ರಶ್ನೆಗೆ ನೀವು ಕೇವಲ **ಒಂದು ಉತ್ತರವನ್ನು ಮಾತ್ರ** ಆಯ್ಕೆ ಮಾಡಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ಎನ್‌ಕೋಡ್ (ಗುರುತು) ಮಾಡಿದಲ್ಲಿ ಆ ಉತ್ತರಗಳನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
7. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ನಿನಲ್ಲಿ** ಮಾತ್ರ ಗುರುತು ಮಾಡಬೇಕು.
8. **ಅಭ್ಯರ್ಥಿಯು ತಮ್ಮ personalised ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿ ಹಾಗೂ ನಾಮಿನಲ್ ರೋಲ್‌ನ ತಮ್ಮ ಅಂಕಣದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು ಒಂದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ವ್ಯತ್ಯಾಸ ಕಂಡು ಬಂದಲ್ಲಿ ಅಭ್ಯರ್ಥಿಯು ಯಾವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನು ಉಪಯೋಗಿಸಿರುತ್ತಾರೆ ಎಂಬುದರ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.**
9. ಒಂದು ವೇಳೆ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ personalised ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
10. ಅಭ್ಯರ್ಥಿಯು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
11. ಅಭ್ಯರ್ಥಿಯು Non-personalised ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಭ್ಯರ್ಥಿಯು ನೋಂದಣಿ ಸಂಖ್ಯೆಯನ್ನು ಒದಗಿಸಿರುವ ಸ್ಥಳದಲ್ಲಿ ಬರೆದು ಸಂಬಂಧಪಟ್ಟ ವೃತ್ತವನ್ನು ತುಂಬಬೇಕು ಹಾಗೂ ತಮ್ಮ ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆಯಬೇಕು. ಮತ್ತು ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡಬೇಕು. ಇಲ್ಲದಿದ್ದಲ್ಲಿ, ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
12. ನಾಮಿನಲ್ ರೋಲ್ **(ಹಾಜರಾತಿ ಹಾಳೆ)**ನಲ್ಲಿ ಅಭ್ಯರ್ಥಿಯು ತಪ್ಪದೇ ಸಹಿ ಹಾಕತಕ್ಕದ್ದು.
13. ಅಭ್ಯರ್ಥಿಯು ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.
14. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
15. ಪರೀಕ್ಷೆ ಮುಗಿದ ನಂತರ ಸಂವೀಕ್ಷಕರಿಂದ ಹಿಂಪಡೆದ ಕಾರ್ಬನ್ ರಹಿತ ಒ.ಎಂ.ಆರ್. ಉತ್ತರ ಹಾಳೆಯ (Candidate Copy) ಪ್ರತಿಯನ್ನು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸಬೇಕು.
16. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪತ್ರಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪತ್ರಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಸ್ಮಾರ್ಟ್ ವಾಚ್‌ಗಳು, ಕ್ಯಾಲ್‌ಕ್ಯುಲೇಟರ್‌ಗಳನ್ನು ಅಥವಾ ಇತರ ಎಲೆಕ್ಟ್ರಾನಿಕ್/ಕಮ್ಯುನಿಕೇಶನ್ ಉಪಕರಣಗಳನ್ನು ಪರೀಕ್ಷಾ ಆವರಣದೊಳಗೆ ತರುವುದನ್ನು ನಿಷೇಧಿಸಲಾಗಿದೆ.**

*Note : English version of the instructions is printed on the back cover of this booklet.*



WWW.SHIKARAT.COM

## GENERAL KNOWLEDGE PAPER - III

**ASSISTANT/FIRST DIVISION ASSISTANT GROUP 'C' POSTS COMPETITIVE EXAMINATION**

**Examination held on 28-02-2021** **Subject Code: 385** **Total marks: 100**
**(10:00 AM TO 11:30 AM)** **One mark for each question**
**No Negative Marks**

**KEY CHART**

**Question Booklet Series - 'A'**

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | 2 | 26 | 3 | 51 | 3 | 76 | 4 |
| 2 | 4 | 27 | 2 | 52 | 2 | 77 | 4 |
| 3 | 3 | 28 | 1 | 53 | 1 | 78 | 4 |
| 4 | 3 | 29 | 2 | 54 | 2 | 79 | 3 |
| 5 | 1 | 30 | 3 | 55 | 4 | 80 | 2 |
| 6 | 4 | 31 | 3 | 56 | 2 | 81 | 2 |
| 7 | 4 | 32 | 3 | 57 | 1 | 82 | 3 |
| 8 | 4 | 33 | 2 | 58 | 1 | 83 | 2 |
| 9 | 2 | 34 | 1 | 59 | 4 | 84 | 2 |
| 10 | 2 | 35 | 1 | 60 | 1 | 85 | 1 |
| 11 | 3 | 36 | 2 | 61 | 2 | 86 | 3 |
| 12 | 2 | 37 | 4 | 62 | 1 | 87 | 1 |
| 13 | 1 | 38 | 1 | 63 | 2 | 88 | 2 |
| 14 | 1 | 39 | 3 | 64 | 3 | 89 | 2 |
| 15 | 3 | 40 | 2 | 65 | 4 | 90 | 3 |
| 16 | 1 | 41 | 3 | 66 | 2 | 91 | 3 |
| 17 | 2 | 42 | 3 | 67 | 4 | 92 | 1 |
| 18 | 4 | 43 | 4 | 68 | 2 | 93 | 3 |
| 19 | 4 | 44 | 2 | 69 | 4 | 94 | 4 |
| 20 | 1 | 45 | 2 | 70 | 1 | 95 | 1 |
| 21 | 2 | 46 | 2 | 71 | 1 | 96 | 3 |
| 22 | 2 | 47 | 3 | 72 | 3 | 97 | 4 |
| 23 | 3 | 48 | 3 | 73 | 2 | 98 | 1 |
| 24 | 3 | 49 | 2 | 74 | 2 | 99 | 3 |
| 25 | 2 | 50 | 4 | 75 | 4 | 100 | 2 |

1. ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡ ದೇಶೀಯ ರಾಜ್ಯಗಳನ್ನು ಕಾಲಾನುಕ್ರಮದಲ್ಲಿ ತಿಳಿಸಿ.

A. ಮರಾಠರು

B. ಹೈದರಾಬಾದ್

C. ಔದ್ (ಅವದ್)

D. ಮೈಸೂರು

(1) D C A B
(2) B D C A
(3) B D A C
(4) A B C D

2. ಒಂದನೇ ಚಂದ್ರಗುಪ್ತನಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

(1) ಒಂದನೇ ಚಂದ್ರಗುಪ್ತನು ನೇಪಾಳಕ್ಕೆ ಸೇರಿದ ಲಿಚ್ಛವಿ ರಾಜಕುಮಾರಿಯನ್ನು ಮದುವೆಯಾದನು.

(2) ಗುಪ್ತರು ವೈಶ್ಯರಾಗಿದ್ದಿರಬಹುದಾದ್ದರಿಂದ ಕ್ಷತ್ರಿಯ ಕುಟುಂಬದೊಂದಿಗೆ ವಿವಾಹ ಬಾಂಧವ್ಯ ಅವರಿಗೆ ಪ್ರತಿಷ್ಠೆಯನ್ನು ನೀಡಿತು.

(3) ಇವನು ಕ್ರಿ.ಶ. 319-320 ರಲ್ಲಿ ಗುಪ್ತಶಕೆಯನ್ನು ಆರಂಭಿಸಿದನು.

(4) ಇವನು 'ವಿಕ್ರಮಾದಿತ್ಯ' ಎಂಬ ಬಿರುದು ಪಡೆದಿದ್ದನು.

3. ಕೆಳಗಿನ ಯಾವ ದೇಶದ ಸಂವಿಧಾನದಿಂದ ಭಾರತದ ರಾಷ್ಟ್ರಪತಿಯನ್ನು ಪದಚ್ಯುತಿಗೊಳಿಸುವ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ ?

(1) ಫ್ರಾನ್ಸ್

(2) ಬ್ರಿಟನ್

(3) ಯು.ಎಸ್.ಎ. (ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ)

(4) ಕೆನಡಾ

4. ಕೆಳಗಿನವರುಗಳಲ್ಲಿ ಯಾರು ಮಂತ್ರಿಮಂಡಲದ ಅಥವಾ ಸಂಸತ್ತಿನ ಸದಸ್ಯರಾಗಿರದಿದ್ದರೂ, ಸಂಸತ್ತಿನಲ್ಲಿ ಅಥವಾ ಸಂಸದೀಯ ಸಮಿತಿಗಳಲ್ಲಿ ಮಾತನಾಡುವ ಹಕ್ಕು ಇದೆ ?

(1) ಆರ್.ಬಿ.ಐ. ನ ಗವರ್ನರ್

(2) ಯು.ಪಿ.ಎಸ್.ಸಿ. ಯ ಅಧ್ಯಕ್ಷರು

(3) ಭಾರತದ ಅಟಾರ್ನಿ ಜನರಲ್

(4) ಭಾರತದ ಮುಖ್ಯ ನ್ಯಾಯಾಧೀಶರು

5. ತಂಬಾಕಿನಲ್ಲಿರುವ ನಿಕೋಟಿನ್ ಒಂದು _____.

(1) ಆಲ್ಕಲಾಯ್ಡ್

(2) ಟರ್ಪೀನ್

(3) ಸ್ಟಿರಾಯ್ಡ್

(4) ಪ್ರೊಟೀನ್



WWW.SHIKARAT.COM

6. 'ರಾಜಕೀಯ ಸಮಾನತೆ' ಎಂದರೆ

(1) ಪ್ರತಿಯೊಬ್ಬ ನಾಗರಿಕನಿಗೆ ರಾಜಕೀಯ ಶಿಕ್ಷಣ ಕೊಡುವುದು.

(2) ಪ್ರತಿಯೊಬ್ಬ ನಾಗರಿಕನಿಗೆ ಸರದಿಯಲ್ಲಿ ಸರ್ಕಾರದಲ್ಲಿ ಕೆಲಸ ಮಾಡಲು ಅವಕಾಶ ಕಲ್ಪಿಸುವುದು.

(3) ಪ್ರತಿಯೊಬ್ಬನೂ ಯಾವುದಾದರೂ ರಾಜಕೀಯ ಪಕ್ಷದಲ್ಲಿ ಸದಸ್ಯತ್ವ ಹೊಂದುವುದು.

(4) ಪ್ರತಿಯೊಬ್ಬ ನಾಗರಿಕನಿಗೂ ಮತದಾನದ ಮತ್ತು ಚುನಾವಣೆಗೆ ಸ್ಪರ್ಧಿಸುವ ಹಕ್ಕುಗಳನ್ನು ಕೊಡುವುದು.

7. ಸಂವಿಧಾನ ರಚನಾ ಸಮಿತಿಯ ಬೇಡಿಕೆಯನ್ನು ಮೊಟ್ಟಮೊದಲು ವ್ಯಕ್ತಪಡಿಸಿದವರು _____

(1) 1938 ರಲ್ಲಿ ಜವಹರಲಾಲ್ ನೆಹರು

(2) 1934 ರಲ್ಲಿ ಎಂ.ಎನ್. ರಾಯ್

(3) 1936 ರಲ್ಲಿ ಕಾಂಗ್ರೆಸ್ ಪಕ್ಷ

(4) 1922 ರಲ್ಲಿ ಮಹಾತ್ಮ ಗಾಂಧೀಜಿ

8. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಚೇರ್ಮನ್ (ಅಧ್ಯಕ್ಷರು) ಯಾರು ?

(1) ರಾಜ್ಯಪಾಲರು

(2) ರಾಷ್ಟ್ರಪತಿ

(3) ಉಪರಾಷ್ಟ್ರಪತಿ

(4) ಪ್ರಧಾನಮಂತ್ರಿ

9. ರಾಯಭಾರಿಗಳು _____ ರವರಿಂದ ನೇಮಿಸಲ್ಪಡುತ್ತಾರೆ.

(1) ವಿದೇಶಾಂಗ ಮಂತ್ರಿ

(2) ಭಾರತದ ರಾಷ್ಟ್ರಪತಿ

(3) ಪ್ರಧಾನಮಂತ್ರಿ

(4) ಕ್ಯಾಬಿನೆಟ್

10. ಸಂಸದೀಯ ಕಾರ್ಯಾಂಗ ಪದ್ಧತಿಯಲ್ಲಿ _____ ಕಾರ್ಯಾಂಗಗಳು ಇರುತ್ತವೆ.

(1) ನಾಮಮಾತ್ರ

(2) ನಾಮಮಾತ್ರ ಹಾಗು ನೈಜಕಾರ್ಯಾಂಗ

(3) ಏಕವ್ಯಕ್ತಿ

(4) ಬಹುವ್ಯಕ್ತಿ

11. ರಾಜ್ಯದಲ್ಲಿ ಅಧೀನ ನ್ಯಾಯಾಲಯಗಳ ಮೇಲ್ವಿಚಾರಣೆಯನ್ನು ಯಾರು ಮಾಡುತ್ತಾರೆ ?

(1) ಕಾನೂನು ಮಂತ್ರಿ

(2) ಸುಪ್ರೀಂ ಕೋರ್ಟ್

(3) ಹೈಕೋರ್ಟ್

(4) ರಾಜ್ಯಪಾಲ

12. ಭಾರತದ ಸಂವಿಧಾನ ರಚನೆಗೆ, ಸಂವಿಧಾನ ರಚನಾ ಸಮಿತಿ ತೆಗೆದುಕೊಂಡ ಕಾಲಾವಧಿ ಎಷ್ಟು?

(1) 3 ವರ್ಷಗಳು, 11 ತಿಂಗಳು, 18 ದಿನಗಳು

(2) 2 ವರ್ಷಗಳು, 11 ತಿಂಗಳು, 18 ದಿನಗಳು

(3) 4 ವರ್ಷಗಳು, 11 ತಿಂಗಳು, 12 ದಿನಗಳು

(4) 2 ವರ್ಷಗಳು, 10 ತಿಂಗಳು, 12 ದಿನಗಳು



WWW.SHIKARAT.COM

13. ನರ್ಮದಾ ನದಿ ಪಶ್ಚಿಮಕ್ಕೆ ಹರಿಯುತ್ತದೆ, ಆದರೆ ಹೆಚ್ಚಿನ ದೊಡ್ಡ ಪೆನಿನ್ಸುಲಾರ್ ನದಿಗಳು ಪೂರ್ವದ ಕಡೆ ಹರಿಯುತ್ತವೆ. ಏಕೆ ?

A. ಇದು ನೀಳವಾದ ಸೀಳು ಕಣಿವೆಯ ಮೂಲಕ ಹರಿಯುತ್ತದೆ.

B. ಇದು ಸಾತ್ಪುರ ಮತ್ತು ಅಜಂತಾ ನಡುವೆ ಹರಿಯುತ್ತದೆ.

C. ದಕ್ಷಿಣದ ಕಡೆ ಭೂಮಿಯ ಇಳಿಜಾರಿನಿಂದಾಗಿ

ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಬಳಸಿ ಸರಿ ಉತ್ತರವನ್ನು ಆರಿಸಿ :

(1) A ಮಾತ್ರ

(2) B ಮತ್ತು C

(3) A ಮತ್ತು C

(4) ಇವುಗಳಲ್ಲಿ ಯಾವುದೂ ಅಲ್ಲ

14. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದುತ್ತದೆ ?

(1) ಯಾನಮ್ : ಪಾಂಡಿಚೇರಿ

(2) ಅಮರಾವತಿ : ತೆಲಂಗಾಣ

(3) ಬಿಕಾನೆರ್ : ಗುಜರಾತ್

(4) ಡಾರ್ಜಿಲಿಂಗ್ : ಉತ್ತರಾಖಂಡ್

15. ಋತುಕಾಲಿಕ ಹಿಮ್ಮುಖವು ಈ ಗಾಳಿಯ ಲಕ್ಷಣವಾಗಿದೆ ____.

(1) ಸಮಭಾಜಕವೃತ್ತ ವಾಯುಗುಣ

(2) ಮೆಡಿಟರೇನಿಯನ್ ವಾಯುಗುಣ

(3) ಮಾನ್ಸೂನ್ ವಾಯುಗುಣ

(4) ಇವುಗಳಲ್ಲಿ ಎಲ್ಲವೂ

16. ಹಸನ್ ನಿಜಾಮಿ ಬರೆದ ಕೃತಿಯ ಹೆಸರು ____.

(1) ತಾಜುಲ್ ಮಾಸಿರ್.

(2) ತಾರೀಕ್ – ಇ – ಬೈಹಾಕಿ

(3) ತಾರೀಕ್ – ಇ – ಮಸೂದಿ

(4) ತಾರೀಕ್ – ಇ – ಫಿರೋಜ್ ಷಾಹಿ



WWW.SHIKARAT.COM

17. ಇವುಗಳಲ್ಲಿ ಯಾವುದು ಸಾಂಪ್ರದಾಯಕ ಸೀರೆ/ಬಟ್ಟೆಗಳನ್ನು ಉತ್ಪಾದಿಸಲು ಪ್ರಸಿದ್ಧವಾಗಿವೆ ?

A. ರಾಯಪುರ್

B. ಮೊಳಕಾಲ್ಮೂರು

C. ಕಂಚಿಪುರಂ

D. ಅಮರಾವತಿ

ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ ಸರಿ ಉತ್ತರ ಆರಿಸಿ.

(1) A ಮತ್ತು B ಮಾತ್ರ

(2) B ಮತ್ತು C ಮಾತ್ರ

(3) A, B ಮತ್ತು C

(4) A, C ಮತ್ತು D

18. ಋತುವಿನಿಂದ ಋತುವಿಗೆ ಹಗಲು ಮತ್ತು ರಾತ್ರಿಯ ಅವಧಿಯಲ್ಲಿನ ವ್ಯತ್ಯಾಸಗಳಿಗೆ ಕಾರಣ _____.

(1) ಭೂಮಿಯ ಅಕ್ಷಭ್ರಮಣ

(2) ಅಂಡಾಕಾರದ ಪಥದಲ್ಲಿ ಭೂಮಿ ಸೂರ್ಯನ ಸುತ್ತ ಸುತ್ತುತ್ತದೆ

(3) ಒಂದು ಸ್ಥಳದ ಅಕ್ಷಾಂಶಿಕ ಸ್ಥಾನ

(4) ಭೂ ಅಕ್ಷದ ಓಲುವಿಕೆಯ ಪರಿಭ್ರಮಣೆ (revolution)

19. ಪನಾಮಾ ಕಾಲುವೆಯಿಂದ ಈ ಕೆಳಗಿನ ಯಾವ ಎರಡು ಖಂಡಗಳು ಬೇರ್ಪಡುತ್ತವೆ ?

(1) ಏಷ್ಯಾ ಮತ್ತು ಆಸ್ಟ್ರೇಲಿಯ

(2) ಯುರೋಪ್ ಮತ್ತು ಆಫ್ರಿಕ

(3) ಏಷ್ಯಾ ಮತ್ತು ಯುರೋಪ್

(4) ಉತ್ತರ ಅಮೇರಿಕ ಮತ್ತು ದಕ್ಷಿಣ ಅಮೇರಿಕ

20. ಖಂಡಾವರಣ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿಲ್ಲ ?

(1) ಆವರಣವು ಭೂ ಫಲಕಗಳ ಗಡಿಗಳಿಗೆ ಪತ್ತಿರದಲ್ಲಿ ಇರುವುದಿಲ್ಲ.

(2) ಅವು ಅಧಿಕವಾದ ಕಣಗಳಿಂದ ಕೂಡಿದೆ.

(3) ಅವು ಭೂಖಂಡಗಳ ಇಳಿಜಾರಿನ ಕಡೆಗೆ ಬಾಗಿವೆ.

(4) ಅವು ಹೆಚ್ಚು ಮೀನುಗಾರಿಕಾ ಪ್ರದೇಶವಾಗಿದೆ.

21. ಟರ್ಕಿಯು _____ ಗಳ ನಡುವೆ ಸ್ಥಿತವಾಗಿದೆ.

(1) ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರ

(2) ಕಪ್ಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ

(3) ಸುಯೇಜ್ ಕೊಲ್ಲಿ ಮತ್ತು ಮೆಡಿಟರೇನಿಯನ್ ಸಮುದ್ರ

(4) ಅಕ್ವಬ ಕೊಲ್ಲಿ ಮತ್ತು ಮೃತ ಸಮುದ್ರ



WWW.SHIKARAT.COM

22. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

**ಹೇಳಿಕೆ I.** ಸೂರ್ಯನ ವಿದ್ಯುತ್ ಅಯಸ್ಕಾಂತ ವಿಕಿರಣದಿಂದ ಭೂಮಿ ಎಲ್ಲಾ ಶಕ್ತಿಯನ್ನು ಪಡೆಯುತ್ತದೆ.

**ಹೇಳಿಕೆ II.** ಭೂ ಗ್ರಹದ ತಾಪ ಅಯವ್ಯಯ ವನ್ನು ಸರಿದೂಗಿಸಲು ಭೂಮಿ ಸೂರ್ಯ ನಿಂದ ಪಡೆದ ಎಲ್ಲಾ ಶಕ್ತಿಯನ್ನು ಭೂ ವಿಕಿರಣದ ಮೂಲಕ ಬಿಟ್ಟುಕೊಡುತ್ತದೆ.

ಕೊಟ್ಟಿರುವ ಆಯ್ಕೆಗಳಿಂದ ಸರಿಯುತ್ತರವನ್ನು ಆರಿಸಿ.

(1) ಎರಡೂ ಹೇಳಿಕೆಗಳು ವೈಯಕ್ತಿಕವಾಗಿ ಸರಿಯಾಗಿವೆ ಮತ್ತು IIನೇ ಹೇಳಿಕೆಯು Iನೇ ಹೇಳಿಕೆಗೆ ಸರಿಯಾದ ವಿವರಣೆ ಯಾಗಿದೆ.

(2) ಎರಡೂ ಹೇಳಿಕೆಗಳು ವೈಯಕ್ತಿಕವಾಗಿ ಸರಿಯಾಗಿವೆ ಮತ್ತು IIನೇ ಹೇಳಿಕೆಯು Iನೇ ಹೇಳಿಕೆಗೆ ಸರಿಯಾದ ವಿವರಣೆಯಾಗಿಲ್ಲ.

(3) Iನೇ ಹೇಳಿಕೆ ಸರಿ ಆದರೆ IIನೇ ಹೇಳಿಕೆ ತಪ್ಪು.

(4) Iನೇ ಹೇಳಿಕೆ ತಪ್ಪು ಆದರೆ IIನೇ ಹೇಳಿಕೆ ಸರಿ.

23. ಈ ಕೆಳಗಿನ ಬಯಲುಗಳಲ್ಲಿ ಯಾವುದು ಸುಣ್ಣದಕಲ್ಲಿನ ಭೂಸ್ವರೂಪದೊಂದಿಗೆ ಸಂಬಂಧ ಹೊಂದಿದೆ ?

(1) ಬಜಡಾ ಮೈದಾನ

(2) ಮೆಕ್ಕಲು ಮೈದಾನ

(3) ಕಾರ್ಸ್ಟ್ ಮೈದಾನ

(4) ಪಾದಬೆಟ್ಟ ಮೈದಾನ

24. ಹೊಂದಿಸಿ ಬರೆಯಿರಿ :

| ರಾಷ್ಟ್ರೀಯ ಉದ್ಯಾನವನ ಹಾಗೂ ವನ್ಯಜೀವಿ ಧಾಮ | ರಾಜ್ಯಗಳು |
|---|---|
| A. ಕಾನ್ಹ | i. ಅಸ್ಸಾಂ |
| B. ಕಾಜಿರಂಗ | ii. ಉತ್ತರ ಪ್ರದೇಶ |
| C. ನಾಗರಹೊಳೆ | iii. ಮಧ್ಯ ಪ್ರದೇಶ |
| D. ಚಂದ್ರಪ್ರಭ | iv. ಕರ್ನಾಟಕ |

ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಉಪಯೋಗಿಸಿ ಸರಿಯುತ್ತರ ಆರಿಸಿ.

**ಸಂಕೇತಗಳು :**

| | A | B | C | D |
|---|---|---|---|---|
| (1) | i | ii | iii | iv |
| (2) | iii | iv | ii | i |
| (3) | iii | i | iv | ii |
| (4) | ii | iii | iv | i |

25. ರೆಗೂರ್ ಮಣ್ಣು ಯಾವ ಬೆಳೆಯ ಕೃಷಿಗೆ ಸೂಕ್ತವಾಗಿದೆ ?

(1) ಕಡಲೆಕಾಯಿ

(2) ಹತ್ತಿ

(3) ತಂಬಾಕು

(4) ಕಬ್ಬು



WWW.SHIKARAT.COM

**Join our Telegram Channel SHIKARAT.COM**
**https://telegram.me/s/shikarat**

**Join our Facebook Page SHIKARAT.COM**
**https://www.facebook.com/shikarat/**

**Join our Instagram SHIKARAT.COM**
**https://www.instagram.com/shikarat_com/**

**Join our Twitter SHIKARAT.COM**
**https://twitter.com/Shikarat_com**

**For more contact us**

**WhatsApp No = 9742928829**

**Email ID= Admin@shikarat.com**

💞 **Sharing is Caring** 💞

😍**If it is helpful Please Share with your friends (WhatsApp and Telegram Group)** 😍

26. ಈ ಕೆಳಗಿನ 'ಹುಲಿ ಸಂರಕ್ಷಣಾವಲಯ' ಮತ್ತು ರಾಜ್ಯಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗಿದೆ ?

(1) ರಣಥಂಬೋರ್ – ಹರಿಯಾಣ
(2) ಪೆರಿಯಾರ್ – ತಮಿಳುನಾಡು
(3) ಜಿಮ್ ಕಾರ್ಬೆಟ್ – ಉತ್ತರಾಖಂಡ
(4) ಭದ್ರಾ – ಆಂಧ್ರ ಪ್ರದೇಶ

27. ಭೂಮಿ ಮತ್ತು ಸೂರ್ಯನ ನಡುವಿನ ಸರಾಸರಿ ಅಂತರವನ್ನು ____ ಎಂದು ಕರೆಯುತ್ತಾರೆ.

(1) ಪಾರ್ಸೆಕ್
(2) ಆಸ್ಟ್ರೋನೊಮಿಕಲ್ ಯುನಿಟ್
(3) ಬೆಳಕಿನ ವರ್ಷ
(4) ಆಂಗ್‌ಸ್ಟ್ರಾಮ್

28. 'ಪ್ರೋಜೆಕ್ಟ್ ಎಲಿಫೆಂಟ್' ಯಾವ ವರ್ಷದಲ್ಲಿ ಜಾರಿಗೆ ಬಂದಿತು ?

(1) 1991-92
(2) 1993-94
(3) 1994-95
(4) 1995-96

29. ಮಳೆಯ ದಿನದಂದು, ನೀರಿನ ಮೇಲಿರುವ ಎಣ್ಣೆಯ ಫಿಲ್ಮ್‌ಗಳು (ಬಿಂದುಗಳಲ್ಲಿ)ಅದ್ಭುತ ಬಣ್ಣ ತೋರಿಸಲು ಕಾರಣ ____.

(1) ಪ್ರಸರಣ
(2) ಹಸ್ತಕ್ಷೇಪ
(3) ವಿವರ್ತನೆ
(4) ಧೃವೀಕರಣ

30. ಸರಳ ಲೋಲಕದ ಅವಧಿಯನ್ನು ದ್ವಿಗುಣಗೊಳಿಸುವ ಸಲುವಾಗಿ ದಾರದ ಉದ್ದವು ಹೀಗೆ ಇರಬೇಕು

(1) ಅರ್ಧ
(2) ದ್ವಿಗುಣ
(3) ನಾಲ್ಕು ಪಟ್ಟು
(4) ಇವುಗಳಲ್ಲಿ ಯಾವುದೂ ಅಲ್ಲ

31. ಆಪ್ಟಿಕಲ್ ಫೈಬರ್ (ದ್ಯುತಿ ತಂತಿ) ಸಂವಹನದ ತತ್ವವೇನು ?

(1) ಆವರ್ತನ ಮಾಡ್ಯುಲೇಶನ್
(2) ಜನಸಂಖ್ಯೆಯ ವಿಲೋಮ
(3) ಒಟ್ಟು ಆಂತರಿಕ ಪ್ರತಿಫಲನ
(4) ಡಾಪ್ಲರ್ ಪರಿಣಾಮ



WWW.SHIKARAT.COM

32. ಈ ಕೆಳಗಿನ ಯಾವುದು ಅತಿಯಾದ ಸ್ಥಿತಿಸ್ಥಾಪಕ ವಸ್ತುವಾಗಿದೆ ?

(1) ರಬ್ಬರ್

(2) ಗ್ಲಾಸ್

(3) ಸ್ಟೀಲ್

(4) ಕ್ಲೇ

33. ಗ್ರಹಗಳ ಚಲನೆಯ ಅವಧಿಯನ್ನು ಯಾವ ನಿಯಮವು ತಿಳಿಸುತ್ತದೆ ?

(1) ಕೆಪ್ಲರ್‌ನ ಎರಡನೇ ನಿಯಮ

(2) ಕೆಪ್ಲರ್‌ನ ಮೂರನೇ ನಿಯಮ

(3) ಕೆಪ್ಲರ್‌ನ ಒಂದನೇ ನಿಯಮ

(4) ನ್ಯೂಟನ್‌ನ ಮೂರನೇ ನಿಯಮ

34. ಚಂಡಮಾರುತದಲ್ಲಿ ಚಾವಣಿಗಳು ಹಾರಿ ಹೋಗುವುದಕ್ಕೆ ಕಾರಣ

(1) ಮೇಲ್ಛಾವಣಿಯ ಮೇಲಿನ ಹೆಚ್ಚಿನ ಗಾಳಿಯ ವೇಗ ಮತ್ತು ಮೇಲ್ಛಾವಣಿಯ ಮೇಲೆ ಕಡಿಮೆ ಒತ್ತಡದಿಂದ

(2) ಮೇಲ್ಛಾವಣಿಯ ಮೇಲಿನ ಕಡಿಮೆ ವೇಗ ಮತ್ತು ಮೇಲ್ಛಾವಣಿಯ ಮೇಲೆ ಕಡಿಮೆ ಒತ್ತಡದಿಂದ

(3) ಮೇಲ್ಛಾವಣಿಯ ಮೇಲಿನ ಕಡಿಮೆ ವೇಗ ಮತ್ತು ಮೇಲ್ಛಾವಣಿಯ ಮೇಲೆ ಹೆಚ್ಚಿನ ಒತ್ತಡದಿಂದ

(4) ಮೇಲ್ಛಾವಣಿಯ ಮೇಲೆ ಹೆಚ್ಚಿನ ಗಾಳಿಯ ವೇಗ ಮತ್ತು ಮೇಲ್ಛಾವಣಿಯ ಮೇಲೆ ಬಹಳ ಒತ್ತಡ ಇರುವುದರಿಂದ

35. ಲೋಹಗಳಲ್ಲಿ ವಿದ್ಯುತ್ ಪ್ರವಾಹವು ಈ ಕೆಳಕಂಡ ಕಾರಣಗಳಿಂದ ಉಂಟಾಗುತ್ತದೆ.

(1) ಲೋಹಗಳಲ್ಲಿನ ಮುಕ್ತ ಎಲೆಕ್ಟ್ರಾನ್‌ಗಳು

(2) ನ್ಯೂಕ್ಲಿಯಸ್‌ಗಳಲ್ಲಿನ ನ್ಯೂಕ್ಲಿಯಾನ್ ಗಳಿಂದ

(3) ಅಣುಗಳ ಕಂಪನದಿಂದ

(4) ಇವುಗಳಲ್ಲಿ ಯಾವುದೂ ಅಲ್ಲ

36. ಹಾಲು ಒಂದು

(1) ಸಾಲ್

(2) ಎಮಲ್ಷನ್

(3) ಜೆಲ್

(4) ಘನ ಸಾಲ್

37. ಟೈರ್‌ಗಳನ್ನು ಸಿದ್ಧಗೊಳಿಸಲು ಈ ಕೆಳಕಂಡ ಯಾವ ವಿಧಾನವನ್ನು ಅನುಸರಿಸಲಾಗುವುದು ?

(1) ಎಲೆಕ್ಟ್ರೋಫೋರೆಸಿಸ್

(2) ಲೀಚಿಂಗ್

(3) ಡಯಾಲಿಸಿಸ್

(4) ವಲ್ಕನೈಸೇಷನ್

38. ಎಲ್ಫಿನ್‌ಸ್ಟೋನ್ ______ ಪ್ರಾಂತ್ಯದ ರಾಜ್ಯಪಾಲರಾಗಿದ್ದರು.

(1) ಬಾಂಬೆ

(2) ಮದ್ರಾಸ್

(3) ಪಾಂಡಿಚೇರಿ

(4) ಬಂಗಾಳ



WWW.SHIKARAT.COM

39. ಕೆಳಗಿನವುಗಳಲ್ಲಿ ಯಾವ ರಾಸಾಯನಿಕವನ್ನು ಹೆಚ್ಚಾಗಿ ಭಾರತದಲ್ಲಿ ಮಾವಿನ ಹಣ್ಣುಗಳನ್ನು ಮಾಗಿಸಲು ಬಳಸುತ್ತಾರೆ ?

(1) ಪೊಟ್ಯಾಶಿಯಂ ಅಯೋಡೈಡ್

(2) ಸಿಲ್ವರ್ ಅಯೋಡೈಡ್

(3) ಕ್ಯಾಲ್ಸಿಯಂ ಕಾರ್ಬೈಡ್

(4) ಅಮೋನಿಯಂ ನೈಟ್ರೇಟ್

40. ಈ ಕೆಳಗಿನ ಯಾವ ಗೊಬ್ಬರವು ಅತಿ ಹೆಚ್ಚಿನ ಶೇಕಡವಾರು ಸಾರಜನಕವನ್ನು ಹೊಂದಿದೆ ?

(1) ಅಮೋನಿಯಂ ನೈಟ್ರೇಟ್

(2) ಯೂರಿಯಾ

(3) ಕ್ಯಾಲ್ಸಿಯಂ ನೈಟ್ರೇಟ್

(4) ಅಮೋನಿಯಂ ಸಲ್ಫೇಟ್

41. ಯಾವ ಪ್ರೊಟೀನ್ ಕಾರ್ಟಿಲೇಜ್‌ನಲ್ಲಿ ಇರುತ್ತದೆ ?

(1) ಹಿಮೋಗ್ಲೋಬಿನ್

(2) ಮಯೋಸಿನ್

(3) ಕೊಲ್ಲಾಜೆನ್

(4) ಕೆರಟಿನ್

42. ಈ ಕೆಳಗಿನ ಯಾವುದರಲ್ಲಿ ಅಫ್ಲಾಟೋಕ್ಸಿನ್ ಉತ್ಪತ್ತಿ ಆಗುತ್ತದೆ ?

(1) ವೈರಸ್

(2) ಬ್ಯಾಕ್ಟೀರಿಯಂ

(3) ಶಿಲೀಂದ್ರಗಳು

(4) ದುಂಡು ಜಂತುಹುಳಗಳು

43. ಈ ಕೆಳಗಿನವುಗಳಲ್ಲಿ ಯಾವುದು ಹಾವಸೆ (Bryophyte) ಆಗಿದೆ ?

(1) ಕ್ಲಬ್ ಮಾಸ್

(2) ರೇನ್‌ಡೀರ್ ಮಾಸ್

(3) ಐರಿಶ್ ಮಾಸ್

(4) ಬೊಗ್ ಮಾಸ್

44. ಅನಾವೃತ ಬೀಜ ಸಸ್ಯಗಳಲ್ಲಿ ಹಣ್ಣುಗಳು ಇರುವುದಿಲ್ಲ. ಏಕೆಂದರೆ ಅವು ಈ ಕೆಳಗಿನವುಗಳಲ್ಲಿ ಒಂದನ್ನು ಹೊಂದಿರುವುದಿಲ್ಲ ?

(1) ಅಂಡಕೋಶ

(2) ಅಂಡಾಶಯ

(3) ಭ್ರೂಣ

(4) ಬೀಜ

45. ಈ ಕೆಳಗಿನವುಗಳಲ್ಲಿ ಯಾವುದನ್ನು "ಹೊಂಡ ರೇಷ್ಮೆ" (Pond Silk) ಎಂದು ಕರೆಯುವರು ?

(1) ಉಲೋಥ್ರಿಕ್ಸ್

(2) ಸ್ಪೈರೋಗೈರಾ

(3) ನೊಸ್ಟೊಕ್

(4) ಅನಾಬಿನಾ



WWW.SHIKARAT.COM

46. ವೈರಸ್‌ಮುಕ್ತ ಸಸ್ಯಗಳನ್ನು ಪಡೆಯಲು, ಈ ಕೆಳಗಿನ ಯಾವ ತಂತ್ರಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ ?

(1) ಮೈಕ್ರೋ ಪ್ರಾಪಗೇಶನ್

(2) ಕಾಂಡದ ತುದಿಯ ಕಲ್ಚರ್

(3) ಬೇರಿನ ತುದಿಯ ಕಲ್ಚರ್

(4) ಗ್ರಾಫ್ಟಿಂಗ್

47. ಈ ಕೆಳಗಿನ ಯಾವ ಸಕ್ಕರೆಯು ನ್ಯೂಕ್ಲಿಕ್ ಆಮ್ಲದಲ್ಲಿ ಸಿಗುತ್ತದೆ ?

(1) ಡೆಕ್ಸ್‌ಟ್ರೋಸ್

(2) ಗ್ಲೂಕೋಸ್

(3) ಡಿಆಕ್ಸಿರೈಬೋಸ್

(4) ಲೆವ್ಯುಲೋಸ್

48. 'ದಿ ಡೆಕ್ಕನ್ ಸಭಾ' ದ ಆಯೋಜಕರು ಯಾರು ?

(1) ಬಾಲಗಂಗಾಧರ ತಿಲಕ್

(2) ಪಿ. ರಾಮಸ್ವಾಮಿ

(3) ಗೋಪಾಲಕೃಷ್ಣ ಗೋಖಲೆ

(4) ಪಟ್ಟಾಭಿ ಸೀತಾರಾಮಯ್ಯ

49. ಬರಾಖ ಅಣು ವಿದ್ಯುತ್ ಸ್ಥಾವರ _____ ನಲ್ಲಿ ಇದೆ.

(1) ಜಪಾನ್

(2) ಯುನೈಟೆಡ್ ಅರಬ್ ಎಮಿರೇಟ್ಸ್

(3) ಇರಾಕ್

(4) ಇರಾನ್

50. ಮಾನವನಲ್ಲಿ ಅಯೋಡಿನ್ ಕೊರತೆಯು ಯಾವ ಕಾಯಿಲೆಯನ್ನು ಉಂಟು ಮಾಡುತ್ತದೆ ?

(1) ಅಸ್ತಮ

(2) ಮೂತ್ರಪಿಂಡದ ಕಲ್ಲು

(3) ಸಿರೋಸಿಸ್

(4) ಗೊಯ್ಟರ್

51. ಎರಡು ಜೀವಕೋಶಗಳ ಮಧ್ಯ ಸಂಪರ್ಕ ಕಲ್ಪಿಸುವ ಭಾಗ

(1) ಪ್ಲಾಸ್ಮಾ ಪದರ

(2) ಕೋಶ ಗೋಡೆ

(3) ಡೆಸ್ಮೋಸೋಮ್ಸ್

(4) ಪ್ಲಾಸ್ಮೋಡೆಸ್ಮಾಟ

52. ಈ ಕೆಳಗಿನವುಗಳಲ್ಲಿ ಹಾಲನ್ನು ಮೊಸರಾಗಿ ಹೊಟ್ಟೆಯಲ್ಲಿ ಪರಿವರ್ತನೆ ಮಾಡುವುದು ಯಾವುದು ?

(1) ಪೆಪ್ಸಿನ್

(2) ರೆನಿನ್

(3) ಎಚ್‌ಸಿಎಲ್ (HCl)

(4) ಇವುಗಳಲ್ಲಿ ಎಲ್ಲವೂ



WWW.SHIKARAT.COM

53. ಮನುಷ್ಯರಲ್ಲಿ ಉಂಟಾಗುವ 'ಅಲ್ಜೀಮರ್' ಕಾಯಿಲೆಯು ಯಾವುದರ ಕೊರತೆಯಿಂದ ಉಂಟಾಗುತ್ತದೆ ?

(1) ಅಸಿಟೈಲ್‌ಕೋಲೈನ್

(2) ಡೋಪಮೈನ್

(3) ಗ್ಲುಟಾಮಿಕ್ ಆಸಿಡ್

(4) ಗಮ್ಮ ಅಮೈನೋ ಬ್ಯೂಟಿರಿಕ್ ಆಸಿಡ್

54. ಪೆನಿಸಿಲಿನ್, ಬ್ಯಾಕ್ಟೀರಿಯಾದ ಬೆಳವಣಿಗೆ-ಯನ್ನು ಈ ಕೆಳಗಿನಂತೆ ತಡೆಯುತ್ತದೆ _____.

(1) ಪ್ರೋಟೀನ್ ಸಂಶ್ಲೇಷಣೆಯನ್ನು ಪ್ರತಿಬಂಧಿಸುತ್ತದೆ.

(2) ಸೆಲ್ ವಾಲ್ ಸಂಶ್ಲೇಷಣೆಯನ್ನು ಪ್ರತಿಬಂಧಿಸುತ್ತದೆ.

(3) ಜೀವಕೋಶ ಪೊರೆಯನ್ನು ಆಕ್ರಮಿಸುವುದು (Attacking).

(4) ಡಿಎನ್‌ಎ ಗೆ ಹಾನಿ ಮಾಡುವ ಮೂಲಕ

55. ಫ್ರೆಡರಿಕ್ ಸ್ಯಾಂಗರ್ ಅನುಕ್ರಮಗೊಳಿಸಿದ ಪ್ರೋಟೀನ್ ಯಾವುದು ?

(1) ಮಯೊಸಿನ್

(2) ಮಯೋಗ್ಲೋಬುಲಿನ್

(3) ಹಿಮೋಗ್ಲೋಬುಲಿನ್

(4) ಇನ್ಸುಲಿನ್

56. ರಾತ್ರಿಯ ಉಪವಾಸದ ಸಮಯದಲ್ಲಿ, _____ ರಕ್ತದಲ್ಲಿನ ಗ್ಲೂಕೋಸ್‌ನ ಪ್ರಮುಖ ಮೂಲವಾಗಿದೆ.

(1) ಕರುಳಿನಿಂದ ಆಹಾರದ ಗ್ಲೂಕೋಸ್

(2) ಹೆಪಾಟಿಕ್ ಗ್ಲೈಕೊಜೆನೊಲಿಸಿಸ್

(3) ಗ್ಲುಕೋನಿಯೊಜೆನೆಸಿಸ್

(4) ಸ್ನಾಯು ಗ್ಲೈಕೊಜೆನೊಲಿಸಿಸ್

57. _____ ಉತ್ಪಾದನೆಯನ್ನು ಕಡಿಮೆ ಮಾಡುವುದರ ಮೂಲಕ ಎಲ್ಲಾ ಪ್ರತಿ - ಇನ್‌ಫ್ಲಮೇಟರಿ ಏಜೆಂಟ್‌ಗಳು ನೋವು ಮತ್ತು ಜ್ವರವನ್ನು ನಿವಾರಿಸುತ್ತವೆ.

(1) ಪ್ರೊಸ್ಟಾಗ್ಲಾಂಡಿನ್ಸ್

(2) ಲ್ಯುಕೋಟ್ರಿಯನ್ಸ್

(3) ಥ್ರೊಂಬೊಕ್ಸೇನ್ಸ್

(4) ಪ್ರೋಟಿಯೊಗ್ಲೈಕಾನ್ಸ್

58. ನೀರಿನ ಅಣುವಿನ ಧ್ರುವೀಯತೆಗೆ ಕಾರಣ _____.

(1) ನೀರಿನಲ್ಲಿ ಆಮ್ಲಜನಕ ಮತ್ತು ಹೈಡ್ರೋಜನ್ ಪರಮಾಣುಗಳ ಎಲೆಕ್ಟ್ರೋನೆಗೆಟಿವಿಟಿಯಲ್ಲಿ ವ್ಯತ್ಯಾಸ.

(2) ನೀರಿನ ಸುಲಭವಾಗಿ ಆಯಾನೀಕರಿಸುವ ವರ್ತನೆ.

(3) ನೀರಿನ ಅಣುವಿನ ಧನಾತ್ಮಕ ಆವೇಶ.

(4) ನೀರಿನ ಅಣುವಿನ ಋಣಾತ್ಮಕ ಆವೇಶ.



WWW.SHIKARAT.COM

59. ಡಿಎನ್‌ಎ ದ ಕರಗುವ ತಾಪಮಾನದಲ್ಲಿ _____ ಆಗುತ್ತದೆ ?

(1) ಘನ ಡಿಎನ್‌ಎ ದ್ರವವಾಗುತ್ತದೆ

(2) ದ್ರವ ಡಿಎನ್‌ಎ ಆವಿಯಾಗುತ್ತದೆ

(3) ಡಿಎನ್‌ಎ ಡಬಲ್ ಹೆಲಿಕ್ಸ್‌ನಿಂದ ಸೂಪರ್ ಕಾಯಲ್ಡ್ ಡಿಎನ್‌ಎ ಆಗಿ ಬದಲಾಗುತ್ತದೆ

(4) ಸ್ಥಳೀಯ ಡಬಲ್ ಹೆಲಿಕಲ್ ಡಿಎನ್‌ಎ ಡಿನ್ಯಾಚುರ್ ಆಗುತ್ತದೆ

60. ಅರಿಶಿನ ಪುಡಿಯನ್ನು ಕಲಬೆರಕೆ ಮಾಡಲು ಯಾವ ಘಟಕವನ್ನು ಬಳಸಲಾಗುತ್ತದೆ ?

(1) ಸೀಸದ ಕ್ರೋಮೇಟ್

(2) ಕ್ಯಾಲ್ಸಿಯಂ ಫಾಸ್ಫೇಟ್

(3) ಪೊಟ್ಯಾಶಿಯಂ ಡೈಕ್ರೊಮೇಟ್

(4) ಸೀಸದ ಫಾಸ್ಫೇಟ್

61. ಡಿಎನ್‌ಎ ಸಂಶ್ಲೇಷಣೆಯನ್ನು ಹೀಗೂ ಕರೆಯುತ್ತಾರೆ

(1) ನಕಲು

(2) ಪುನರಾವರ್ತನೆ

(3) ಪ್ರತಿಲೇಖನ

(4) ಅನುವಾದ

62. ಮಾನವ ಬಂಡವಾಳವನ್ನು ಪರಿವರ್ತಿಸುವ ಸುಸ್ಥಿರ ಕ್ರಿಯೆ (SATH) ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು _____.

(1) ಎನ್‌ಐಟಿಐ (NITI) ಆಯೋಗ್

(2) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ

(3) ವಿಶ್ವ ಬ್ಯಾಂಕ್ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ

(4) ಇವುಗಳಲ್ಲಿ ಯಾವುದೂ ಅಲ್ಲ

63. ಆಗಾಗ್ಗೆ ಸುದ್ದಿಯಲ್ಲಿ ಕಂಡುಬರುವ "ಗರಿಷ್ಠ ಅನುಮತಿಸಬಹುದಾದ ಪೂರ್ವ ಉತ್ಪಾದನಾ ವೆಚ್ಚಗಳು" (MAPE) ಎಂಬ ಪದವನ್ನು ಯಾವ ಸಂದರ್ಭದಲ್ಲಿ ಬಳಸಲಾಗುತ್ತದೆ ?

(1) ಕೃಷಿ ಪ್ರಕ್ರಿಯೆ ಕೈಗಾರಿಕೆಗಳು

(2) ಔಷಧೀಯ ನೀತಿ

(3) ಆಟೋಮೊಬೈಲ್ ಕೈಗಾರಿಕೆಗಳು

(4) ದತ್ತಾಂಶ ಕೇಂದ್ರಗಳು

64. ಗರ್ಭಧಾರಣೆಯ ಪರೀಕ್ಷೆಗಾಗಿ ಮೂತ್ರದಲ್ಲಿ ಯಾವ ಹಾರ್ಮೋನ್‌ನನ್ನು ಪತ್ತೆ ಮಾಡಲಾಗುತ್ತದೆ ?

(1) ಇನ್ಸುಲಿನ್

(2) ಟೆಸ್ಟೋಸ್ಟೆರಾನ್

(3) ಮಾನವ ಕೋರಿಯಾನಿಕ್ ಗೊನಡೋಟ್ರೋಪಿನ್

(4) ಆಕ್ಸಿಟೋಸಿನ್



WWW.SHIKARAT.COM

65. ಭಾರತದಲ್ಲಿ ಅತಿಹೆಚ್ಚು ಎಫ್‌ಡಿಐ ಇಕ್ವಿಟಿ ಒಳಹರಿವನ್ನು ಆಕರ್ಷಿಸುವ ಕ್ಷೇತ್ರ _____.

(1) ದೂರಸಂಪರ್ಕ

(2) ಹೋಟೆಲ್ ಮತ್ತು ಪ್ರವಾಸೋದ್ಯಮ

(3) ಡ್ರಗ್ಸ್ ಮತ್ತು ಫಾರ್ಮಾಸ್ಯುಟಿಕಲ್ಸ್

(4) ಸೇವೆಗಳು

66. ಹಣಕಾಸು ಸ್ಥಿರತೆ ವರದಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ _____ ಬಿಡುಗಡೆ ಮಾಡುತ್ತದೆ.

(1) ವರ್ಷಕ್ಕೊಮ್ಮೆ

(2) ವರ್ಷದಲ್ಲಿ ಎರಡು ಬಾರಿ

(3) ಪ್ರತಿ ತಿಂಗಳಿಗೊಮ್ಮೆ

(4) ಪ್ರತಿ ಮೂರು ತಿಂಗಳಿಗೊಮ್ಮೆ

67. ಜಾಗತಿಕ ಅಪಾಯಗಳ ವರದಿ 2021 ಅನ್ನು ಬಿಡುಗಡೆಗೊಳಿಸಿದವರು

(1) ವಿಶ್ವ ಬ್ಯಾಂಕ್

(2) ಅಂತರರಾಷ್ಟ್ರೀಯ ಹಣಕಾಸು ನಿಧಿ

(3) ವಿಶ್ವ ವ್ಯಾಪಾರ ಸಂಸ್ಥೆ

(4) ವಿಶ್ವ ಆರ್ಥಿಕ ವೇದಿಕೆ

68. ಪ್ರಾಜೆಕ್ಟ್ ಕಿರಣಾ (Project Kirana) ದ ಗುರಿ _____.

(1) ಚಿಲ್ಲರೆ ಮಾರಾಟಗಾರರನ್ನು ಬೆಂಬಲಿಸುವುದು.

(2) ಮಹಿಳಾ ಉದ್ಯಮಿಗಳನ್ನು ಬೆಂಬಲಿಸುವುದು.

(3) ರೈತರನ್ನು ಬೆಂಬಲಿಸುವುದು.

(4) ಇವುಗಳಲ್ಲಿ ಯಾವುದೂ ಅಲ್ಲ

69. ಹಿರಿಯ ನಾಗರಿಕರಿಗಾಗಿ "ಪ್ರಧಾನ ಮಂತ್ರಿ ವಯ ವಂದನ ಯೋಜನೆ" (PMVVY) ಯನ್ನು _____ ರಿಂದ ನೀಡಲ್ಪಟ್ಟಿದೆ.

(1) ಸಾಮಾನ್ಯ ವಿಮಾ ಕಂಪನಿ

(2) ಯುನೈಟೆಡ್ ಇಂಡಿಯಾ ವಿಮಾ ಕಂಪನಿ

(3) ಬಜಾಜ್ ಅಲಿಯಾನ್ಸ್ ಜೀವ ವಿಮಾ ಕಂಪನಿ

(4) ಭಾರತದ ಜೀವ ವಿಮಾ ನಿಗಮ

70. ವಿಶ್ವಸಂಸ್ಥೆಯ ಹೂಡಿಕೆ ಪ್ರಚಾರ (UNIPA) ಪ್ರಶಸ್ತಿ, 2020 ನ್ನು ಯಾರಿಗೆ ನೀಡಲಾಯಿತು ?

(1) ಇನ್ವೆಸ್ಟ್ ಇಂಡಿಯಾ

(2) ಮೇಕ್ ಇನ್ ಇಂಡಿಯಾ

(3) ಭಾರತ ವ್ಯಾಪಾರ ಪ್ರಚಾರ ಸಂಸ್ಥೆ

(4) ಇವುಗಳಲ್ಲಿ ಯಾವುದೂ ಅಲ್ಲ



WWW.SHIKARAT.COM

71. ಈ ಕೆಳಗಿನವುಗಳಲ್ಲಿ ಯಾವ ಮೂಲ ಧಾತು ನಮ್ಮ ಬ್ರಹ್ಮಾಂಡದಲ್ಲಿ ಅತ್ಯಂತ ಹೇರಳವಾಗಿ ದೊರೆಯುತ್ತದೆ ?

(1) ಹೈಡ್ರೋಜನ್

(2) ಸಾರಜನಕ

(3) ಹೀಲಿಯಂ

(4) ಆಮ್ಲಜನಕ

72. ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿ ಮಸೂದೆ, 2020 ಇದಕ್ಕೆ ಅನ್ವಯಿಸುವುದಿಲ್ಲ ?

(1) ಪ್ರಾಥಮಿಕ ಕೃಷಿ ಸಾಲ ಸಂಘಗಳು

(2) ಕೃಷಿ ಅಭಿವೃದ್ಧಿಗಾಗಿ ದೀರ್ಘಕಾಲೀನ ಹಣಕಾಸು ನೆರವನ್ನು ಒದಗಿಸುವುದೇ ತಮ್ಮ ಪ್ರಾಥಮಿಕ ಉದ್ದೇಶ ಮತ್ತು ಪ್ರಧಾನ ವ್ಯವಹಾರವಾಗಿ ಮಾಡಿಕೊಂಡಿರುವ ಸಹಕಾರಿ ಸಂಘಗಳು.

(3) (1) ಮತ್ತು (2) ಎರಡೂ

(4) ಇವುಗಳಲ್ಲಿ ಯಾವುದೂ ಅಲ್ಲ

73. ಇತ್ತೀಚೆಗೆ ಸುದ್ದಿಯಲ್ಲಿ ಕಂಡುಬಂದ "ಉತ್ಕರ್ಷ್ 2022" ಯಾವುದನ್ನು ಉಲ್ಲೇಖಿಸುತ್ತದೆ ?

(1) 2022ರ ವೇಳೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವ ಮಾರ್ಗಸೂಚಿ

(2) ದೇಶದಲ್ಲಿ ಸ್ಥೂಲ–ಆರ್ಥಿಕ ವಾತಾವರಣ ವನ್ನು ವಿಕಸಿಸಲು ಆರ್‌ಬಿಐ ನ ಮಧ್ಯಮ–ಅವಧಿಯ ಕಾರ್ಯತಂತ್ರದ ಚೌಕಟ್ಟು

(3) ರೈಲ್ವೆ ತನ್ನ ಮೇಲ್/ಎಕ್ಸ್‌ಪ್ರೆಸ್ ರೈಲುಗಳ ನವೀಕರಣದ ಭಾಗವಾಗಿ ರೇಕ್‌ಗಳನ್ನು ಅಭಿವೃದ್ಧಿಪಡಿಸುವ ಯೋಜನೆ

(4) 2022ರ ವೇಳೆಗೆ ಹೊಸ ಭಾರತವನ್ನು ನಿರ್ಮಿಸಲು ಎನ್‌ಐಟಿಐ ಆಯೋಗ (NITI Aayog) ದ ಕಾರ್ಯತಂತ್ರ

74. ಯಾವ ರಾಜ್ಯವು "ನಾನೂ ಕೂಡ ಡಿಜಿಟಲ್" ಎಂಬ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ-ವನ್ನು ಇತ್ತೀಚೆಗೆ ಜಾರಿಗೊಳಿಸಿದೆ ?

(1) ಒಡಿಶಾ

(2) ಕೇರಳ

(3) ಕರ್ನಾಟಕ

(4) ತಮಿಳುನಾಡು


WWW.SHIKARAT.COM

75. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಉಪಯೋಗಿಸಿ ಸರಿಯುತ್ತರ ಆಯ್ಕೆ ಮಾಡಿ.

| ಪಟ್ಟಿ-I | ಪಟ್ಟಿ-II |
|---|---|
| A. ವರ್ಗಾವಣೆ ಬೇಸಾಯ | i. ಪಿಗ್ಮಿಗಳು |
| B. ಪಶುಸಾಕಾಣಿಕೆ | ii. ಎಸ್ಕಿಮೋ |
| C. ಬೇಟೆಗಾರರು ಮತ್ತು ಆಹಾರ ಸಂಗ್ರಹಕರು | iii. ಕಿರ್ಗೀಜ್‌ರು |
| D. ಬೇಟೆಗಾರರು | iv. ರೆಂಗ್ಮಾಸ್ |

ಸಂಕೇಗಳು :

| | A | B | C | D |
|---|---|---|---|---|
| (1) | i | ii | iii | iv |
| (2) | i | iii | ii | iv |
| (3) | iv | i | iii | ii |
| (4) | iv | iii | i | ii |

76. ಭಾರತದ ಅಟಾರ್ನಿ ಜನರಲ್‌ಗೆ ಸಂಬಂಧಿಸಿದಂತೆ, ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆ ಯಾವುದು ?

A. ಭಾರತ ಸರ್ಕಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಮಾತ್ರ ವಾದಿಸುವುದು.

B. ಭಾರತ ಸರ್ಕಾರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ಎರಡರಲ್ಲಿಯೂ ವಾದಿಸುವುದು.

C. ಇವರು ಭಾರತದಾದ್ಯಂತ ಯಾವುದೇ ನ್ಯಾಯಾಲಯದಲ್ಲಿ ಹಾಜರಾಗಬಹುದು.

D. ಇವರು ಪೂರ್ಣಕಾಲಿಕ ಕಾನೂನು ಸಲಹೆಗಾರರಾಗಿರುತ್ತಾರೆ.

(1) A, B, C ಮತ್ತು D

(2) B, C ಮತ್ತು D

(3) A ಮತ್ತು B ಮಾತ್ರ

(4) A, B ಮತ್ತು C ಮಾತ್ರ

77. ದ್ಯುತಿಸಂಶ್ಲೇಷಣೆಯ ಉಪ ಉತ್ಪನ್ನಗಳಲ್ಲಿ ಪ್ರಮುಖವಾದ ವಾತಾವರಣದ ಉಪ ಉತ್ಪನ್ನ ____.

(1) ಸಾರಜನಕ

(2) ನೀರು

(3) ಇಂಗಾಲದ ಡೈಆಕ್ಸೈಡ್

(4) ಆಮ್ಲಜನಕ

78. ಆಸ್ಪರ್ಟೆನ್ ಸಕ್ಕರೆಗಿಂತ ಸಿಹಿಯಾದುದು. ಇದು ____.

(1) ಡೈಸ್ಯಾಕರೈಡ್

(2) ಮೊನೋಸ್ಯಾಕರೈಡ್

(3) ಅಮೈನೊ ಆಮ್ಲ

(4) ಡೈಪೆಪ್ಟೈಡ್

79. ಪಾಲಿಪೆಪ್ಟೈಡ್‌ಗಳು ____ ನಿಂದ ಮಾಡಲ್ಪಟ್ಟ ರೇಖೀಯ ಪಾಲಿಮರ್‌ಗಳಾಗಿವೆ.

(1) ಕೊಬ್ಬಿನಾಮ್ಲಗಳು

(2) ಸಕ್ಕರೆಗಳು

(3) ಅಮೈನೋ ಆಮ್ಲಗಳು

(4) ನ್ಯೂಕ್ಲಿಯೋಟೈಡ್‌ಗಳು



WWW.SHIKARAT.COM

80. ಈ ಕೆಳಗಿನವುಗಳಲ್ಲಿ ಭಾರತದ ಅತಿ ಉದ್ದದ ಎಕ್ಸ್‌ಪ್ರೆಸ್ ದಾರಿ ಯಾವುದು ?

(1) ಯಮುನಾ ಎಕ್ಸ್‌ಪ್ರೆಸ್ ದಾರಿ

(2) ಆಗ್ರಾ – ಲಕ್ನೋ ಎಕ್ಸ್‌ಪ್ರೆಸ್ ದಾರಿ

(3) ಹಿಮಾಲಯನ್ ಎಕ್ಸ್‌ಪ್ರೆಸ್ ದಾರಿ

(4) ದೆಹಲಿ – ಮೀರತ್ ಎಕ್ಸ್‌ಪ್ರೆಸ್ ದಾರಿ

81. ಮಾನವ ಶರೀರದಲ್ಲಿ ನೀರಿನ ಮಟ್ಟವನ್ನು _____ ಹಾರ್ಮೋನ್ ನಿಯಂತ್ರಿಸುತ್ತದೆ.

(1) ಎಸಿಟಿಎಚ್ (ACTH)

(2) ಎಡಿಎಚ್ (ADH)

(3) ಎಫ್‌ಎಸ್‌ಎಚ್ (FSH)

(4) ಎಪಿನೆಫ್ರಿನ್ (Epinephrine)

82. _____ ನ ಕುಂದುಕೊರತೆಗಳನ್ನು ಬಗೆಹರಿಸಲು ಪ್ರಧಾನ ಮಂತ್ರಿಗಳು "ಚಾಂಪಿಯನ್ಸ್" ಪೋರ್ಟಲ್‌ನನ್ನು ಪ್ರಾರಂಭಿಸಿದರು.

(1) ಆರೋಗ್ಯ ಪಾಲನಾ ವಲಯ

(2) ಕೃಷಿ ವಲಯ

(3) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ವಲಯ (MSME)

(4) ಶಿಕ್ಷಣ ವಲಯ

83. 'ಅಟಲ್ ಸುರಂಗ'ವು ಒಂದು ಹೆದ್ದಾರಿ ಮಾರ್ಗವಾಗಿದ್ದು, ಇದನ್ನು _____ ರಡಿ ನಿರ್ಮಿಸಲಾಗಿದೆ.

(1) ಖಾರ್ದುಂಗ್ ಲಾ ಪಾಸ್

(2) ರೋಹ್ತಾಂಗ್ ಲಾ ಪಾಸ್

(3) ಜೋಜಿ ಲಾ ಪಾಸ್

(4) ನಾಥು ಲಾ ಪಾಸ್

84. ಯಾವ ಪತ್ರಕರ್ತರಿಗೆ 2019-20 ರ ಪೆನ್ ಗೌರಿ ಲಂಕೇಶ್ ಪ್ರಶಸ್ತಿಯನ್ನು ನೀಡಲಾಗಿದೆ ?

(1) ರವೀಶ್ ಕುಮಾರ್

(2) ಯೂಸುಫ್ ಜಮೀಲ್

(3) ಎನ್. ರಾಮ್

(4) ಪ್ರಣಯ್ ರಾಯ್

85. ಅಕ್ಕಿಗೆ ಹೊಳಪು ಕೊಡುವುದರಿಂದ ಅಥವಾ ಅಕ್ಕಿಯನ್ನು ಪದೇ ಪದೇ ತೊಳೆಯುವುದರಿಂದ _____ ವಿಟಮಿನ್ ಅನ್ನು ಕಳೆದುಕೊಳ್ಳುತ್ತದೆ.

(1) ಥೈಯಾಮಿನ್

(2) ರೈಬೋಫ್ಲೇವಿನ್

(3) ನಿಯಾಸಿನ್

(4) ಬಯೋಟಿನ್


WWW.SHIKARAT.COM

86. ತೈಲಗಳು ಮತ್ತು ಕೊಬ್ಬಿನ ತೀವ್ರತೆಯು ____ ರಿಂದ ಉಂಟಾಗುತ್ತದೆ.

(1) ಟ್ರೈಗ್ಲಿಸರೈಡ್ ಗಳ ಜಲವಿಚೇದನೆ

(2) ಅಪರ್ಯಾಪ್ತ ಗ್ಲಿಸರೈಡ್‌ಗಳ ಆಕ್ಸಿಡೀಕರಣ

(3) (1) ಮತ್ತು (2) ಎರಡೂ

(4) ಇವುಗಳಲ್ಲಿ ಯಾವುದೂ ಅಲ್ಲ

87. ಬೌದ್ಧ ಧರ್ಮವು ____ ಜೀವನಕ್ಕೆ ಹೆಚ್ಚು ಮಹತ್ವವನ್ನು ನೀಡಿತ್ತು.

(1) ನಗರ

(2) ಗ್ರಾಮೀಣ

(3) ಸಮದರ್ಶಿ

(4) ಅರಣ್ಯ

88. ಭಾರತಕ್ಕೆ ರೋಮನ್‌ನಿಂದ ರಫ್ತಾಗುತ್ತಿದ್ದ ವಸ್ತುಗಳ ಪಟ್ಟಿಯಲ್ಲಿ ಕೆಳಗಿನ ಯಾವುದು ಒಳಗೊಂಡಿರಲಿಲ್ಲ?

(1) ದ್ರಾಕ್ಷಾರಸ ಜಾಡಿ

(2) ಒಣ ಹಣ್ಣುಗಳು

(3) ಅರ್ರೆಟೈನ್ ಮಡಕೆಗಳು

(4) ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು

89. ಮಹಮ್ಮದ್ ಬಿನ್ ತುಘಲಕ್ ____ ನನ್ನು ನ್ಯಾಯಾಧೀಶನನ್ನಾಗಿ ನೇಮಿಸಿದ್ದನು.

(1) ಮಾರ್ಕೊ ಪೋಲೊ

(2) ಇಬ್ನ್ ಬತುತಾ

(3) ಅಲ್ ಇಸ್ತಾಕ್ರಿ

(4) ಅಲ್ ಮಸೂದಿ

90. ಜರೋಕ – ಇ – ದರ್ಶನ್ ಯಾರ ಚಿಂತನೆಯ ಕೂಸಾಗಿತ್ತು ?

(1) ಬಾಬರ್

(2) ಜಹಾಂಗೀರ್

(3) ಅಕ್ಬರ್

(4) ಔರಂಗಜೇಬ್

91. ಕಬೀರನ ಮರಣದ ತರುವಾಯ ಆತನ ಗೋರಿಯನ್ನು ಎಲ್ಲಿ ಕಟ್ಟಲಾಯಿತು ?

(1) ವಾರಣಾಸಿ

(2) ಗೋರಖ್‌ಪುರ

(3) ಮಘರ್

(4) ಬಸ್ತಿ

92. ಬೆನ್‌ಜೀನ್ ರಿಂಗ್ ಹೊಂದಿರುವ ಅಮೈನೊ ಆಮ್ಲಕ್ಕೆ____ ಉದಾಹರಣೆಯಾಗಿದೆ.

(1) ಟೈರೋಸಿನ್

(2) ಅಲನೈನ್

(3) ಲೈಸಿನ್

(4) ಸೆರೈನ್



WWW.SHIKARAT.COM

**93.** ಪೂರ್ವ ಭಾರತದಲ್ಲಿ ಬ್ರಿಟಿಷರು ಮೊದಲ ಫ್ಯಾಕ್ಟರಿಯನ್ನು ತೆರೆದಿದ್ದು ಯಾವ ಸ್ಥಳದಲ್ಲಿ ?

(1) ಬಂಗಾಳ

(2) ಬಿಹಾರ

(3) ಒರಿಸ್ಸಾ

(4) ಅಸ್ಸಾಂ

**94.** "ಧರ್ಮ ಇಲ್ಲ, ಜಾತಿ ಇಲ್ಲ ಮತ್ತು ಮಾನವ ಕುಲಕ್ಕೆ ದೇವರಿಲ್ಲ" ಎಂಬ ತಮ್ಮ ಉದ್ದೇಶವನ್ನು ಯಾರು ಘೋಷಿಸಿದರು ?

(1) ಶ್ರೀ ನಾರಾಯಣ ಗುರು

(2) ರಾಮಸ್ವಾಮಿ ನಾಯ್ಕರ್

(3) ಜ್ಯೋತಿಬಾ ಫುಲೆ

(4) ಶದರನ್ ಅಯ್ಯಪ್ಪನ್

**95.** 'ವಿಜಯನಗರ : ದಿ ಒರಿಜಿನ್ ಆಫ್ ದಿ ಸಿಟಿ ಅಂಡ್ ದಿ ಎಂಪೈರ್' ಪ್ರಖ್ಯಾತ ಕೃತಿಯ ಲೇಖಕರು ____.

(1) ವೆಂಕಟರಮಣಯ್ಯ ಎನ್.

(2) ಐಯ್ಯಂಗಾರ್ ಎಸ್.ಕೆ.

(3) ವೆಂಕಟರತ್ನಂ ಎ.ವಿ.

(4) ಬರ್ಟನ್ ಸ್ಟೈನ್

**96.** ನಾಲ್ಕನೆಯ ಆಂಗ್ಲೋ – ಮೈಸೂರು ಯುದ್ಧ ನಡೆದಾಗ ಯಾರು ಬ್ರಿಟೀಷ್ ಗವರ್ನರ್ ಜನರಲ್ ಆಗಿದ್ದರು ?

(1) ಲಾರ್ಡ್ ವಾರೆನ್ ಹೇಸ್ಟಿಂಗ್ಸ್

(2) ಲಾರ್ಡ್ ಕಾರ್ನ್‌ವಾಲೀಸ್

(3) ಲಾರ್ಡ್ ವೆಲ್ಲೆಸ್ಲಿ

(4) ಲಾರ್ಡ್ ಡಾಲ್‌ಹೌಸಿ

**97.** ಡೆಟಾಲ್ ನ ರಾಸಾಯನಿಕ ಹೆಸರು ____

(1) ಫಿನಾಲ್ ನ ದುರ್ಬಲ ದ್ರಾವಣ

(2) ಸಲ್ಫಾನಿಲಾಮೈಡ್

(3) ಆರ್ಥೋ – ಹೈಡ್ರಾಕ್ಸಿ ಬೆನ್ಜೋಯಿಕ್ ಆಮ್ಲ

(4) ಕ್ಲೋರೊಕ್ಸೈಲಿನಾಲ್



WWW.SHIKARAT.COM

98. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ, ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯುತ್ತರ ಆರಿಸಿ :

| ಪಟ್ಟಿ-I | ಪಟ್ಟಿ-II |
|---|---|
| A. ಪ್ರಜಾಪ್ರತಿನಿಧಿ ಸಭೆ | i. ಸರ್. ಎಂ. ವಿಶ್ವೇಶ್ವರಯ್ಯ |
| B. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ | ii. ಕೆ. ಶೇಷಾದ್ರಿ ಅಯ್ಯರ್ |
| C. ಭದ್ರಾವತಿಯಲ್ಲಿ ಸಿಮೆಂಟ್ ಮತ್ತು ಕಾಗದ ಕಾರ್ಖಾನೆ | iii. ರಂಗಾಚಾರ್ಲು |
| D. ಬೆಂಗಳೂರಿನ ಸರ್ಕಾರಿ ಸಾಬೂನು ಕಾರ್ಖಾನೆ ಸ್ಥಾಪನೆ | iv. ಮಿರ್ಜಾ ಇಸ್ಮಾಯಿಲ್ |

ಸಂಕೇತಗಳು :

| | A | B | C | D |
|---|---|---|---|---|
| (1) | iii | ii | i | iv |
| (2) | iii | ii | iv | i |
| (3) | iv | i | iii | ii |
| (4) | iv | i | ii | iii |

99. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಹೊಂದಿಸಿ, ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯುತ್ತರ ಆರಿಸಿ :

| ಪಟ್ಟಿ-I<br>ಸಾಗರ | ಪಟ್ಟಿ-II<br>ಆಳವಾದ ಕಂದರ |
|---|---|
| A. ಉತ್ತರ ಪೆಸಿಫಿಕ್ ಸಾಗರ | i. ಟೊಂಗ |
| B. ಅಟ್ಲಾಂಟಿಕ್ ಸಾಗರ | ii. ಜಾವಾ ಕಂದರ |
| C. ಹಿಂದೂ ಮಹಾಸಾಗರ | iii. ಮೆರಿಯಾನ ಕಂದರ |
| D. ದಕ್ಷಿಣ ಪೆಸಿಫಿಕ್ | iv. ಪ್ಯುಯೆರ್ಟೊ ರಿಕೊ ಕಂದರ |

ಸಂಕೇತಗಳು :

| | A | B | C | D |
|---|---|---|---|---|
| (1) | i | ii | iii | iv |
| (2) | ii | i | iv | iii |
| (3) | iii | iv | ii | i |
| (4) | iv | iii | i | ii |

100. ಪೋರ್ಚುಗೀಸರು 'ಕಾಳುಮೆಣಸಿನ ರಾಣಿ' ಎಂದು ಈ ಕೆಳಗಿನ ಯಾವ ರಾಣಿಯನ್ನು ಕರೆಯುತ್ತಿದ್ದರು ?

(1) ರಾಣಿ ಅಬ್ಬಕ್ಕ
(2) ರಾಣಿ ಚನ್ನಭೈರದೇವಿ
(3) ರಾಣಿ ರುದ್ರಮಾದೇವಿ
(4) ರಾಣಿ ಚನ್ನಮ್ಮ



WWW.SHIKARAT.COM